ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೊಡಗು ಮಡಿಕೇರಿ.

ಓ ಎಸ್ ನಂಬರ್:**64/66/67-2016**

ಪಿಡಬ್ಲ್ಯು: 2

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹೀಂದ್ರ ಕುಮಾರ್ |
| ತಂದೆ ಹೆಸರು | : | ಲೇಟ್ ಕೆ ವಿಷಕಂಠ |
| ಪ್ರಾಯ | : | 58 ವರ್ಷ |
| ಉದ್ಯೋಗ | : | ಸರ್ವೆ ಸುಪರ್ ವೈಸರ್ |
| ವಾಸಸ್ಥಳ | : | ಮಡಿಕೇರಿ |

**ದಿ:02.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ:**

1. ನಾನು 1996 ರಿಂದ 2021 ರವರೆಗೆ ಸರ್ವೆಯರ್ ಆಗಿ ಸರ್ವೆ ಇಲಾಖೆಯಲ್ಲಿ ಕೆಲಸ ಮಾಡಿರುತ್ತೇನೆ, ಈಗ ನಾನು ಸರ್ವೆ ಸೂಪರ್ ವೈಸರ್ ಆಗಿರುತ್ತೇನೆ. 1996 ರಿಂದ 2013 ರವರೆಗೆ ಮಡಿಕೇರಿಯ ಸರ್ವೆ ಇಲಾಖೆಯ ಕಛೇರಿಯಲ್ಲಿ ಸರ್ವೇಯರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ದಾವೆಗೆ ಸಂಬಂಧಿಸಿದ ವಾದಿಯವರು ಸಲ್ಲಿಸಿದಂತಹ ಹದ್ದು ಬಸ್ತು ಅರ್ಜಿ ನನಗೆ **ತಹಶೀಲ್ದಾರ್ ರವರ** ಮುಖಾಂತರ ಬಂದಿರುತ್ತದೆ. ಸದರಿ ಅರ್ಜಿಯನ್ನು ನಾನು ಸ್ವೀಕರಿಸಿದ ನಂತರ ಅರ್ಜಿದಾರರು ಅರ್ಜಿಯಲ್ಲಿ ತಿಳಿಸಿರುವಂತಹ ಆಜುಬಾಜುದಾರರಿಗೆ ನೋಟಿಸನ್ನು ನೀಡಿರುತ್ತೇನೆ. ಆಜುಬಾಜುದಾರರಿಗೆ ನೋಟಿಸನ್ನು ನೀಡಿದ ನಂತರದಲ್ಲಿ ನಿಗಧಿಪಡಿಸಿದಂತಹ ದಿನಾಂಕದಂದು ನಾನು ಸ್ಥಳಕ್ಕೆ ಭೇಟಿ ನೀಡಿ ಸರ್ವೆ ಮಾಡಿರುತ್ತೇನೆ.

2. ನಿಪಿ 12 ನಾನು ಸರ್ವೆ ಇಲಾಖೆಯವರಿಗೆ ನೀಡಿರುವಂತಹ ಸರ್ವೆ ಸ್ಕೆಚ್ ನ ದೃಢೀಕೃತ ನಕಲು ಆಗಿರುತ್ತದೆ. ನಿಪಿ 12 ವರದಿಯ ಪ್ರಕಾರ ಪ್ಯಾರಾ 4 ರಲ್ಲಿ ದಾವಾ ಷೆಡ್ಯೂಲ್ ಸ್ವತ್ತು ಆದಂತಹ ಸರ್ವೆ ನಂ:37/2 ನ್ನು ತೋರಿಸಿರುತ್ತೇನೆ. ನಾನು ನೀಡಿರುವಂತಹ ನಿಪಿ 12 ವರದಿಯ ಪ್ರಕಾರ ಸರ್ವೆ ನಂ:37/2 ರ 1 ಎಕರೆ ಆಸ್ತಿಯನ್ನು ಬಾಜುದಾರರಾದ ಸರ್ವೆ ನಂ:37/1 ರವರು ಒತ್ತುವರಿ ಮಾಡಿರುತ್ತಾರೆ. ಅದೇ ರೀತಿ ಸರ್ವೆ

ನಂ:37/2 ರ 1.75 ಎಕರೆ ಆಸ್ತಿಯನ್ನು ಬಾಜುದಾರರಾದ ಸರ್ವೆ ನಂ:37/7 ರವರು ಒತ್ತುವರಿ



ಮಾಡಿರುತ್ತಾರೆ. ಅದೇ ರೀತಿ ಸರ್ವೆ ನಂ:37/2 ರ 50 ಸೆಂಟ್ ಆಸ್ತಿಯನ್ನು ಬಾಜುದಾರರಾದ ಸರ್ವೆ ನಂ:37/8 ರವರು ಒತ್ತುವರಿ ಮಾಡಿರುತ್ತಾರೆ.

**ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.